ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಈಗಾಗಲೇ ಸುಧೀರ್ಘವಾದ ಉತ್ತರವನ್ನು ಮಾನ್ಯ ಸದಸ್ಯರಿಗೆ ಕೊಡಲಾಗಿದೆ.

ಶ್ರೀ ಇ. ತುಕಾರಾಮ್:– ಉತ್ತರ ತಲುಪಿದೆ. ಇದರಲ್ಲಿ KIADB Act ಪ್ರಕಾರ ಸರಿಯಾದಂಥ ಪರಿಹಾರ ಸಿಕ್ಕಿಲ್ಲ. ಅಲ್ಲೇನಾಗಿದೆಯೆಂದರೆ ದರಗಳು ಮೆ: ಬ್ರಹ್ಮಣಿಯದ್ದು ಮತ್ತು ಮೆ: ಮಿತ್ತಲ್ ಸ್ಟೀಲ್ ಸಂಸ್ಥೆಯದ್ದು ಬೇರೆ ಬೇರೆಯಾಗಿದೆ. ದಯಮಾಡಿ ಸರ್ಕಾರದ ಕಡೆಯಿಂದ ರೈತರಿಗೆ ನ್ಯಾಯವನ್ನು ಒದಗಿಸಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಸುದೀರ್ಘವಾದಂಥ ಉತ್ತರವನ್ನು ಕೊಡಲಾಗಿದೆ. ಅವರು ಅನೇಕ ವಿಚಾರಗಳನ್ನು ಹೇಳಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಅದಕ್ಕೆ ಸರ್ಕಾರ ಅತ್ಯಂತ ಸಹಾನುಭೂತಿಯಿಂದ ಅವರ ಮನವಿಯನ್ನು ಪರಿಶೀಲನೆ ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತದೆ.

ಅಧ್ಯಕ್ಷರು:– O.k.

6. ಗಮನ ಸೆಳೆಯುವ ಸೂಚನೆಗಳು

i) ವಿಷಯ: ಸಂವಿಧಾನದ ಮೂಲಭೂತ ಹಕ್ಕುಗಳಲ್ಲಿ ಸಮಾನತೆಯ ಹಕ್ಕಿದ್ದರೂ ಅನೇಕ ಗ್ರಾಮಗಳಲ್ಲಿ ಇದುವರೆಗೂ ಅಸ್ಪೃಶ್ಯತೆಯ ಪದ್ಧತಿ ಜಾರಿಯಲ್ಲಿರುವುದರಿಂದ ಉಂಟಾಗಿರುವ ತೊಂದರೆಗಳ ಬಗ್ಗೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):– ಮಾನ್ಯ ಅಧ್ಯಕ್ಷರೆ, ಸ್ವಾತಂತ್ರ್ಯ ಬಂದು 67 ವರ್ಷವಾದರೂ ಕೂಡ ಅಸ್ಪೃಶ್ಯತೆ ಆಚರಣೆ ಹಳ್ಳಿಯಲ್ಲಿ ಇನ್ನೂ ಇದೆ.

ಅಧ್ಯಕ್ಷರು:– ನೀವು ವಿಷಯ ಕೇಳಿ, ಹಳೇ ಇತಿಹಾಸ ಹೇಳುವುದಕ್ಕೆ ಹೋಗುತ್ತೀರಿ.

ಶ್ರೀ ಗೋವಿಂದ ಎಂ. ಕಾರಜೋಳ:– ಆ ಜನರಿಗೆ ನೀರು, ಬಾವಿ ಮುಟ್ಟುವುದಕ್ಕೆ ಬಿಡುವುದಿಲ್ಲ. ಬಹಿಷ್ಕಾರ ಹಾಕುತ್ತಾರೆ.

ಅಧ್ಯಕ್ಷರು:– ಅಸ್ಪೃಶ್ಯತೆ ಇನ್ನೂ ಇದೆ ಎಂದು ಹೇಳುತ್ತೀರಿ. ಅದನ್ನೇ ಕೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಇಂತಹ ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ ಬಿಡಬಾರದು. ದಲಿತರಿಗೆ ರಕ್ಷಣೆ ಕೊಡಬೇಕು.

ಅಧ್ಯಕ್ಷರು:– ಗೋವಿಂದ್‌ರವರೆ, ತಮ್ಮ ಗಮನ ಸೆಳೆಯುವ ಸೂಚನೆಗೆ reply ಬಂದಿಲ್ಲ. Sorry, ಅದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, reply ಬಂದಿಲ್ಲವೆ? ಸರ್ಕಾರಕ್ಕೆ ಆಗಲೇ ಗೊತ್ತಾಗಲಿಲ್ಲವೇ? ಮುದ್ದೇಬಿಹಾಳ್ ತಹಶೀಲ್ದಾರ್ ರಿಪೋರ್ಟ್ ಹಾಕಿದ್ದಾರೆ, ಹಡಪದ ಅಪ್ಪಣ್ಣಮೂರ್ತಿಯದು.

ಅಧ್ಯಕ್ಷರು:– ನೀವು ಎಲ್ಲಿಂದ ಎಲ್ಲಿಗೆ ಮಾತನಾಡಿಕೊಂಡು ಹೋಗುತ್ತಿದ್ದೀರಿ?

ಶ್ರೀ ಗೋವಿಂದ ಎಂ. ಕಾರಜೋಳ:– ಇದು ಅಸ್ಪೃಶ್ಯತೆಗೆ ಸಂಬಂಧಪಟ್ಟಂತಹ ವಿಚಾರ.

ಅಧ್ಯಕ್ಷರು:– ಇಲ್ಲ ಬರುವುದಿಲ್ಲ. ಇದಕ್ಕೆ reply ಬಂದಿಲ್ಲ, ಅದಕ್ಕೆ ಉತ್ತರವನ್ನು ನಾಳೆ ಕೊಡಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮುಂಜಾನೆ ಎದ್ದು ನೋಡಬಾರದು ಎಂದು ಹಡಪದ ಅಪ್ಪಣ್ಣನ ಮೂರ್ತಿ ಇಡಬಾರದು ಎಂದು ಒತ್ತಾಯ ಮಾಡುತ್ತಿದ್ದಾರೆ, ಇದನ್ನು ತಹಶೀಲ್ದಾರ್ ರಿಪೋರ್ಟ್

ಮಾಡುತ್ತಿದ್ದಾರೆ, ಕೂಡಲೇ ಮುದ್ದೇಬಿಹಾಳ್ ತಹಶೀಲ್ದಾರ್‌ರವರನ್ನು ಸಸ್ಪೆಂಡ್ ಮಾಡಿ.

ಅಧ್ಯಕ್ಷರು:– ಆಯಿತು, ಈಗ ಶ್ರೀ ಹೆಚ್.ಆರ್. ಅಲಗೂರುರವರು ಕೇಳಿ.

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ:– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ದಯವಿಟ್ಟು ಹೇಳಬೇಕು. ಅಪ್ಪಣ್ಣನವರದು ತಹಶೀಲ್ದಾರ್ ರಿಪೋರ್ಟ್ ಯಾವಾಗ ಹಾಕಿದ್ದಾರೆ?

ಅಧ್ಯಕ್ಷರು:– ಇದು ಬೇಡ.

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ:– ನನ್ನ ಮತಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು, ಅಪಣ್ಣನವರ ಮೂರ್ತಿ ಅಲ್ಲಿ ಇಡಬೇಕಾಗುತ್ತದೆ. ಅವರ ಮೂರ್ತಿ ಅಲ್ಲಿ ಸ್ಥಾಪನೆ ಆಗಬೇಕು. ತಹಶೀಲ್ದಾರ್ ಯಾವ ಕಾಲದಲ್ಲಿ ಬಂದ, ಆ ರೀತಿ ಮಾಡಿದವನು ಯಾರು ಎಂದು ದಯವಿಟ್ಟು ಸ್ವಲ್ಪ ಮಾಹಿತಿ ಕೊಟ್ಟರೆ ಅವನ ಮೇಲೆ ಆಕ್ಷನ್ ತೆಗೆದುಕೊಳ್ಳಿ.

ಅಧ್ಯಕ್ಷರು:– ಇದರ ಬಗ್ಗೆ ಚರ್ಚೆ ಮಾಡುವುದಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ಅದರ ಕಾಪಿ ಕೊಟ್ಟಿದ್ದೇನೆ.

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ:– ಅವನ ಮೇಲೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ನಾನು ನಿಮ್ಮ ಜೊತೆ ಧ್ವನಿಗೂಡಿಸುತ್ತೇನೆ. ಅವನ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕು.

ಶ್ರೀ ಗೋವಿಂದ ಎಂ. ಕಾರಜೋಳ:– ಅವನ ಮೇಲೆ ಆಕ್ಷನ್ ತೆಗೆದುಕೊಳ್ಳಲೇಬೇಕು. ನಾನು ನಿಮಗೆ ಅದರ ಕಾಪಿ ಕೊಡುತ್ತೇನೆ.

ಅಧ್ಯಕ್ಷರು:– ಶ್ರೀ ಹೆಚ್.ಆರ್. ಅಲಗೂರ್ ಕೇಳಿ. ಅವರು ಇಲ್ಲ. ಶ್ರೀ ಕೆ.ಬಿ. ಕೋಳಿವಾಡ್. ಅವರು ಇಲ್ಲ ಶ್ರೀ ಎಲ್.ಎ. ರವಿ ಸುಬ್ರಮ್ಮಣ್ಯ ಅವರ ಪರವಾಗಿ ಯಾರು ಕೇಳುತ್ತೀರಿ ಕೇಳಿ.